ಸಾಕ್ಷಿಯನ್ನು 24.05.2022 ರಂದು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು. **ಪಿ.ಡಬ್ಲ್ಯೂ-1**

**ಪಾಟೀಸವಾಲುಃ- ಪ್ರತಿವಾದಿ 1 ಮತ್ತು 2 ರವರ ಪರವಾಗಿ ಶ್ರೀ. ಹೆಚ್ ಸಿ ಎಸ್ ವಕೀಲರಿಂದಃ-**

**1.** ಈ ದಾವೆಯನ್ನು ನಾನು 18 ಅಡಿ ಅಗಲ ಹಾಗೂ 50 ಅಡಿ ಉದ್ದ ರಸ್ತೆಗೋಸ್ಕರ ಹಾಕಿರುತ್ತೇನೆ. ನಾನು ದಾವಾ ಆಸ್ತಿಯನ್ನು ಸುಮಾರು 30 ವರ್ಷಗಳ ಹಿಂದೆ ತೆಗೆದುಕೊಂಡಿರುತ್ತೇನೆ ದಿನಾಂಕ ನನಗೆ ನೆನಪಿಲ್ಲ. ಸದರಿ ಆಸ್ತಿಯನ್ನು ಪ್ರತಿವಾದಿ 1 ರಿಂದ 3 ಹಾಗೂ ಕಮಲಮ್ಮ ಮತ್ತು ಸರೋಜಮ್ಮರವರು ಅಳತೆ ಮಾಡಿಸಿ ಸ್ವಾಧೀನ ಕೊಟ್ಟಿರುತ್ತಾರೆ ಎಂದರೆ ಸರಿ . 1999 ನೇ ಇಸವಿಯಿಂದ ನಾನು ತೆಗೆದುಕೊಂಡಿರುವ ಜಮೀನಿನ ಸ್ವಾಧೀನದಲ್ಲಿ ಇದ್ದೇನೆ ಎಂದರೆ ಸರಿ. ನಾನು ಜಮೀನನ್ನು ತೆಗೆದುಕೊಂಡ ಸಮಯದಲ್ಲಿ ಅದು ಇ ಸ್ವತ್ತು ಆಗಿತ್ತು. ನಾನು ಪಡೆದುಕೊಂಡಿರುವ ಕ್ರಯಪತ್ರದಲ್ಲಿ ದಕ್ಷಿಣದ ಕಡೆ 18 ಅಡಿ ರಸ್ತೆ ಎಂದು ಬರೆದಿದ್ದಾರೆ ಎಂದರೆ ಸರಿ . ನಾನು ಜಮೀನು ಕ್ರಯಕ್ಕೆ ಪಡೆದುಕೊಂಡ ಸಂದರ್ಭದಲ್ಲಿ ಸದರಿ 18 ಅಡಿ ರಸ್ತೆಯಲ್ಲಿ ಓಡಾಡುತ್ತಿದ್ದೆವು ಎಂದರೆ ಸರಿ. ಸರ್ವೆ ನಂ. 775/2 ರಲ್ಲಿ ಎಷ್ಟು ಎಕರೆ ಜಮೀನನ್ನು ನನಗೆ ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ. 775/2 ರ ಒಟ್ಟು ವಿಸ್ತೀರ್ಣ 2 ಎಕರೆ 32 ಗುಂಟೆ ಪೈಕಿ ಪೂರ್ವ ಪಶ್ಚಿಮ 50 ಅಡಿ ಹಾಗೂ ಉತ್ತರ ದಕ್ಷಿಣ 60 ಅಡಿ ವಿಸ್ತೀರ್ಣದ ಜಾಗವನ್ನು ನನಗೆ ಕೊಟ್ಟಿದ್ದರು ಎಂದರೆ ಸರಿ . ನಾನು ಸದರಿ ಜಾಗವನ್ನು ಎಷ್ಟು ಮೊತ್ತಕ್ಕೆ ಕ್ರಯಕ್ಕೆ ಪಡೆದುಕೊಂಡಿದ್ದೆ ಎಂದು ನನಗೆ ಮರೆತು ಹೋಗಿದೆ. ಕ್ರಯಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿರುವ ವ್ಯಕ್ತಿಗಳ ಹೆಸರು ನನಗೆ ನೆನಪಿಲ್ಲ. ನಾನು ಕ್ರಯಕ್ಕೆ ಪಡೆದುಕೊಂಡ ಸಮಯದಲ್ಲಿ ಸರ್ವೆ ನಂ.775/2 ರಲ್ಲಿ ಎಕರೆ 1 ಕ್ಕೆ ಅಂದಾಜು 2 ಲಕ್ಷ ಮೌಲ್ಯ ಇತ್ತು. ಕ್ರಯಪತ್ರದ ಮೊತ್ತವನ್ನು ನಾನು ಪ್ರತಿವಾದಿ 1 ಮತ್ತು 2 ರವರಿಗೆ ಕೊಟ್ಟಿರುತ್ತೇನೆ ಎಷ್ಟು ಮೊತ್ತ ಕೊಟ್ಟಿದ್ದೆ ಎಂದು ನನಗೆ ಈಗ ನೆನಪಿಗೆ ಬರುತ್ತಿಲ್ಲ. 1 ಮತ್ತು 2 ನೆ ಪ್ರತಿವಾದಿಗಳು ನನಗೆ ದಾವಾ ಎ ಷೆಡ್ಯೂಲ್ ಆಸ್ತಿಯನ್ನು ಮಾರಾಟ ಮಾಡಿದ ನಂತರ ಸರ್ವೆ ನಂ. 775/2 ರಲ್ಲಿ ಉಳಿದ ನಿವೇಶನಗಳನ್ನು ಬೇರೆಬೇರೆಯವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ

ಸರಿ . ನನಗೆ 18 ಅಡಿ ರಸ್ತೆಯ ಬಗ್ಗೆ ಸುಮಾರು 7-8 ವರ್ಷಗಳ ಹಿಂದೆ ತಿಳಿದಿರುತ್ತದೆ. ಅದಕ್ಕು ಮೊದಲು ರಸ್ತೆ ಇತ್ತು. 18 ಅಡಿ ರಸ್ತೆಯನ್ನು ಅಕ್ಕಪಕ್ಕದವರು ಒತ್ತುವರಿ ಮಾಡಿ ಮನೆಯನ್ನು ಕಟ್ಟಿಕೊಂಡಿರುತ್ತಾರೆ. ಆ ರೀತಿ ಒತ್ತುವರಿ ಮಾಡಿರುವ ವ್ಯಕ್ತಿಗಳ ಹೆಸರನ್ನು ನನಗೆ ಹೇಳಲು ಆಗುವುದಿಲ್ಲ. ಸದರಿ ಒತ್ತುವರಿ ಮಾಡಿರುವ ವ್ಯಕ್ತಿಗಳಿಗೆ ನಾನು ನೋಟಿಸನ್ನು ಕಳುಹಿಸಿರುವುದಿಲ್ಲ. ದಾವಾ ಆಸ್ತಿ ಎ ಷೆಡ್ಯೂಲ್ ನ ಪೂರ್ವಕ್ಕೆ ನಾಗರಾಜುರವರ ಸ್ವತ್ತು , ಪಶ್ಚಿಮಕ್ಕೆ ಈಗ ಯಾರು ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಉತ್ತರಕ್ಕೆ ಯಾರು ಇದ್ದಾರೆ ಎಂದು ನನಗೆ ಗೊತ್ತಿಲ್ಲ. ದಕ್ಷಿಣಕ್ಕೆ ರಸ್ತೆ ಇರುತ್ತದೆ. ನನ್ನ ನಿವೇಶನಕ್ಕೆ ಿ ಓಡಾಡಲು ರಸ್ತೆ ಇದೆ ಎಂದರೆ ಸಾಕ್ಷಿ ಮೊದಲಿಗೆ ಇತ್ತು ಈಗ ಇಲ್ಲ ಎಂದು ನುಡಿದಿದ್ದಾರೆ. ಸದರಿ ರಸ್ತೆ 18 x 50 ಅಡಿ ಇರುತ್ತದೆ. ಸದರಿ ರಸ್ತೆಯಲ್ಲಿ ಈಗಲು ಕೂಡ ಟ್ರಾಕ್ಟರ್ ಮತ್ತು ಇತರೆ ವಾಹನಗಳು ಓಡಾಡಬಹುದು ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀಸವಾಲನ್ನು ಪ್ರತಿವಾದಿ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇ.

ಪಿ.ಸಿ.ಜೆ. ಮತ್ತು ಜೆಎಂಎಫ್‌ಸಿ,
ಮಳವಳ್ಳಿ